ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

## ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ: ಸಿ3(7) ಪ್ರಾಶಾಶಿ–ವರ್ಗ–07/2017–18 **ದಿನಾಂಕ: 09–02–2018**

**: ಜ್ಞಾಪನ :**

ವಿಷಯ:– 2017–18ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವೃಂದದ ಶಿಕ್ಷಕರುಗಳಿಗೆ ಕಡ್ಡಾಯ ವರ್ಗಾವಣೆ ಮಾಡಲು ಕ್ರಮವಹಿಸುವ ಬಗ್ಗೆ:

ಉಲ್ಲೇಖ:–1) ಕರ್ನಾಟಕ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ ಸಂಖ್ಯೆ: ಇಡಿ 12 ಇಟಿಆರ್ 2017 ದಿನಾಂಕ: 29/11/2017.

2) ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣಾ ಮಾರ್ಗಸೂಚಿ ಸಂಖ್ಯೆ: ಸಿ3(7) ಪ್ರಾಶಾಶಿ–ವರ್ಗ–07/2017–18 ದಿನಾಂಕ: 29/12/2017.

3) ಪ್ರೌಢ ಶಾಲಾ ಶಿಕ್ಷಕರ ವರ್ಗಾವಣಾ ಮಾರ್ಗಸೂಚಿ ಸಂಖ್ಯೆ: ಸಿ4(7) ಪ್ರೌ.ಶಿ–ವರ್ಗ–29/2017–18 ದಿನಾಂಕ: 01/01/2018.

----*****----

2017–18 ನೇ ಸಾಲಿನ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗೆ ಮಾರ್ಗಸೂಚಿ ಸಹಿತ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಕಡ್ಡಾಯ ವರ್ಗಾವಣೆಗಳು, ಚಾಲ್ತಿಯಲ್ಲಿರುವ 'ವರ್ಗಾವಣೆ ನಿಯಮಗಳ' ನಿಯಮ–6 ಮತ್ತು 7 ರಲ್ಲಿನ ನಿಯಮಗಳಂತೆ ಇರುತ್ತದೆ ಮತ್ತು ವರ್ಗಾವಣಾ ಪ್ರಾಧಿಕಾರಿಗಳ ಗಮನಕ್ಕೆ ಹಾಗೂ ಶಿಕ್ಷಕರ ಗಮನಕ್ಕೆ ಪ್ರಮುಖವಾದ ಕಡ್ಡಾಯ ವರ್ಗಾವಣಾ ಅಂಶಗಳ ಬಗ್ಗೆ ಈಗಾಗಲೇ ವರ್ಗಾವಣಾ ಮಾರ್ಗಸೂಚಿಯಲ್ಲಿ ವಿವರಿಸಲಾಗಿದೆ. ವರ್ಗಾವಣಾ ಮಾರ್ಗಸೂಚಿಯಲ್ಲಿರುವ ಅಂಶಗಳನ್ನು ಮತ್ತೊಮ್ಮೆ ಪರಿಶೀಲಿಸಿಕೊಳ್ಳಲು ಸೂಚಿಸಿದೆ.

ಇದೀಗ ಕಡ್ಡಾಯ ವರ್ಗಾವಣೆಗೆ ಅರ್ಹರಿರುವ ಶಿಕ್ಷಕರ ವಿವರಗಳು ವರ್ಗಾವಣಾ ತಂತ್ರಾಂಶದಲ್ಲಿ ಲಭ್ಯವಿದ್ದು. ಉಪನಿರ್ದೇಶಕರು ಹಾಗೂ ವಿಭಾಗೀಯ ಸಹನಿರ್ದೇಶಕರು ತಮ್ಮ ಲಾಗ್–ಇನ್ ಮುಖಾಂತರ ತಾತ್ಕಾಲಿಕ ಪಟ್ಟಿಯನ್ನು ಪಡೆದುಕೊಳ್ಳಬಹುದಾಗಿದೆ. ನಿಯಮಾನುಸಾರ ಆಕ್ಷೇಪಣೆಗಳನ್ನು ಆಹ್ವಾನಿಸಿ ಪಟ್ಟಿಯನ್ನು ಪ್ರಕಟಿಸತಕ್ಕದ್ದು. ಸಲ್ಲಿಕೆಯಾಗುವ ಆಕ್ಷೇಪಣೆಗಳನ್ನು ಸೇವಾ ಪುಸ್ತಕದಲ್ಲಿನ ಮಾಹಿತಿಗಳ ಆಧಾರದಲ್ಲಿ ಪರಿಶೀಲಿಸಿ ವರ್ಗಾವಣಾ ಕಾಯ್ದೆ ಸೆಕ್ಷನ್ 3ಎ ಮತ್ತಿತರೆ ಹಾಗು ವರ್ಗಾವಣಾ ನಿಯಮಗಳಂತೆ ಅಂತಿಮಗೊಳಿಸಿ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

ಆಕ್ಷೇಪಣೆಗಳ ಕುರಿತು ಪ್ರತ್ಯೇಕ ವಹಿಯನ್ನು ನಿರ್ವಹಿಸಿ ಉಪನಿರ್ದೇಶಕರು ಹಾಗೂ ವಿಭಾಗೀಯ ಸಹನಿರ್ದೇಶಕರು ದೃಢೀಕರಣ ಸಹಿತ ಕೈಗೊಂಡ ಕ್ರಮದ ಬಗ್ಗೆ ಷರಾ ನಮೂದಿಸುವುದು. ದೂರುಗಳ ಸಂದರ್ಭದಲ್ಲಿ ವಹಿಯನ್ನು ಈ ಕಛೇರಿಗೆ ಪರಿಶೀಲನೆಗೆ ಒಪ್ಪಿಸಬೇಕಾಗುತ್ತದೆ.

ಸಿಬ್ಬಂಧಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಮಾನ್ಯತೆ ಪಡೆದ ಶಿಕ್ಷಕರ ಸಂಘ ಮತ್ತು ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾಯಿತ ಪದಾಧಿಕಾರಿಗಳು (ನಾಮನಿರ್ದೇಶನ ಹೊಂದಿದ ಶಿಕ್ಷಕರಿಗೆ ವಿನಾಯಿತಿಗೆ ಅವಕಾಶವಿರುವುದಿಲ್ಲ), ಅವಿವಾಹಿತ ಮಹಿಳಾ ಶಿಕ್ಷಕರು, ವಿಧವಾ ಮಹಿಳಾ ಶಿಕ್ಷಕರು, ಶೇ 40 ಕ್ಕಿಂತ ಹೆಚ್ಚಿನ ಪ್ರಮಾಣದ ಅಂಗವಿಕಲತೆಯನ್ನು ಹೊಂದಿರುವ ಶಿಕ್ಷಕರುಗಳಿಗೆ ಮಾತ್ರ ಕಡ್ಡಾಯ ವರ್ಗಾವಣೆಯಿಂದ ವಿನಾಯಿತಿ ಇರುತ್ತದೆ. ಉಳಿದಂತೆ ಇತರೆ ಯಾವುದೇ ಪ್ರಕರಣಗಳಿಗೆ ವಿನಾಯಿತಿಗೆ ಅವಕಾಶ ನೀಡತಕ್ಕದ್ದಲ್ಲ. ವಿನಾಯಿತಿ ನೀಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಮೂಲ ಪ್ರಮಾಣ ಪತ್ರಗಳು ಮತ್ತಿತರ ಪೂರಕ ದಾಖಲೆಗಳನ್ನು ಪರಿಶೀಲಿಸುವುದು. ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವೈದ್ಯಕೀಯ ಮಂಡಳಿಗೆ ಬರೆದ ಪತ್ರ ಸಂಖ್ಯೆ: ಸಿ3(7)

Scanned by CamScanner

ಪ್ರಾ.ಶಾ.ಶಿ. ವರ್ಗ, ವೈ.ತ/01/2017–18 ದಿನಾಂಕ: 06/01/2018 ರಲ್ಲಿ ನಿಗಧಿಪಡಿಸಿರುವ ಮಾನದಂಡಗಳ ಅಂಶಗಳ ಪ್ರಕಾರ ಅಂಗವಿಕಲ ಪ್ರಕರಣದಲ್ಲಿ ಜಿಲ್ಲಾ ಮಟ್ಟದ ತ್ರಿಸದಸ್ಯ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರ ಪಡೆದಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಸದರಿ ಪತ್ರವನ್ನು ಮತ್ತೊಮ್ಮೆ ಗಮನಿಸಲು ತಿಳಿಸಿದೆ.

ಕಡ್ಡಾಯ ವರ್ಗಾವಣೆ ಸಂದರ್ಭದಲ್ಲಿ ಯಾವುದೇ ಲೋಪಗಳಿಗೆ ಗೊಂದಲಗಳಿಗೆ ಆಸ್ಪದ ನೀಡದೇ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲು ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ತಿಳಿಸಿದೆ. ಯಾವುದೇ ರೀತಿಯ ಅವ್ಯವಹಾರ ತಾರತಮ್ಯ ಪ್ರಕರಣಗಳು ಕಂಡುಬಂದಲ್ಲಿ ಅಥವಾ ನ್ಯಾಯಾಲಯ ಪ್ರಕರಣಗಳು ಉದ್ಭವವಾದಲ್ಲಿ ಅದಕ್ಕೆ ಸಂಬಂಧಪಟ್ಟ ವರ್ಗಾವಣಾ ಪ್ರಾಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಆದ್ದರಿಂದ ಯಾವುದೇ ದೂರುಗಳಿಗೆ ಹಾಗೂ ಗೊಂದಲಗಳಿಗೆ ಆಸ್ಪದವಿಲ್ಲದಂತೆ ವರ್ಗಾವಣಾ ಪ್ರಕ್ರಿಯೆಯನ್ನು ಕೈಗೊಳ್ಳಲು ತಿಳಿಸಿದೆ.

ನಿರ್ದೇಶಕರು
ಪ್ರೌಢ ಶಿಕ್ಷಣ

ನಿರ್ದೇಶಕರು
ಪ್ರಾಥಮಿಕ ಶಿಕ್ಷಣ

ಇವರಿಗೆ,

1. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ವಿಭಾಗೀಯ ಸಹ ನಿರ್ದೇಶಕರು ಬೆಂಗಳೂರು/ಮೈಸೂರು ವಿಭಾಗ.
2. ಅಪರ ಆಯುಕ್ತರು, ಕಲಬುರ್ಗಿ/ಧಾರವಾಡದ ಸಹನಿರ್ದೇಶಕರು, ಅಪರ ಆಯುಕ್ತರ ಕಛೇರಿ ಧಾರವಾಡ ಗುಲ್ಬರ್ಗ.
3. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ
4. ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರ)

Scanned by CamScanner